ಅ) ಈ ನೌಕರರು ತಮ್ಮನ್ನು ಖಾಯಂ ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ ? ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಇದುವರೆವಿಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಹಾಗೂ ಆಹಾರ ನಾಗರೀಕ ಸರಬರಾಜು ಮಂತ್ರಿಗಳು).—

ಅ) ೮ ಮಂದಿ ಕ್ರಮೇಣ ೧.೩.೭೯, ೪.೩.೭೯ ೧.೮.೭೬, ೧೪.೭.೮೨, ೧೨-೭-೮೨ ೧೭.೭.೮೨ ಮತ್ತು ೧೦.೧೨.೮೪ ರಿಂದ ಈವರೆವಿಗೂ.

ಆ) ಹೌದು. ಸದರಿ ನೌಕರರನ್ನು ಖಾಯಂ ಮಾಡುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಆದರೆ ನಗರ ಯೋಜನಾ ಪ್ರಾಧಿಕಾರದ ಮಾನವಿಯಂತೆ ಏಳು ಹುದ್ದೆಗಳನ್ನು ಸೃಷ್ಟಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಹುಕ್ಕೇರಿ ಕುಡಿಯುವ ನೀರಿನ ಯೋಜನೆ ಬಗ್ಗೆ

೧೪೨೬. **ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.** (ಸಂಕೇಶ್ವರ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಕ್ಕೇರಿ ನೀರು ಸರಬರಾಜು ಯೋಜನೆ ಮಂಜೂರಾಗಿ ಎಷ್ಟು ದಿನ ಆಯಿತು ?

ಆ) ಈಗಾಗಲೇ ಈ ಕೆಲಸಕ್ಕಾಗಿ ವೆಚ್ಚವಾಗಿರುವ ಹಣದ ಮೊತ್ತವೆಷ್ಟು ?

ಇ) ಈ ಕೆಲಸವನ್ನು ಪೂರ್ತಿಗೊಳಿಸಲು ಎಷ್ಟು ಕಾಲಾವಧಿ ಬೇಕು ?

ಈ) ಆರ್ಥಿಕ ಮಂಗ್ಗಟ್ಟಿನಲ್ಲಿರುವ ಹುಕ್ಕೇರಿ ಪುರಸಭೆಯು ನೀರಿನ ಯೋಜನೆಯ ಪ್ರತಿಶತ ಹತ್ತರಷ್ಟು ವಂತಿಗೆಯನ್ನು ವಜಾ ಮಾಡಲಿಕ್ಕೆ ಆಗುತ್ತಿರುವ ತೊಂದರೆ ಏನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಸುಮಾರು ೧ ವರ್ಷ ೮ ತಿಂಗಳು ಆಯಿತು.

ಆ) ರೂ. ೩೯೩,೦೮೮.೦೦ (ಜನವರಿ ೧೯೮೭ರ ಅಂತ್ಯದವರೆಗೆ)

ಇ) ೧೯೮೮ರ ಜನವರಿ ಅಂತ್ಯದ ವೇಳೆಗೆ ಈ ಯೋಜನೆಯಿಂದ ಪಟ್ಟಣಕ್ಕೆ ನೀರು ಸರಬರಾಜು ಮಾಡಲು ಉದ್ದೇಶಿಸಿದೆ.

ಈ) ಪುರಸಭೆಗಳು ಕೊಳವೆ ನೀರು ಸರಬರಾಜುಯೋಜನೆಗೆ ಕಟ್ಟಬೇಕಾದ ಶೇಕಾಡ ೧೦ರ ವಂತಿಗೆ ಕಟ್ಟುವುದಕ್ಕೆ ದಿನಾಂಕ ೧೦.೯.೮೮ರಿಂದ ವಿನಾಯ್ತಿ ನೀಡಲಾಗಿದೆ. ಆದರೆ ಆ ದಿನಾಂಕದ ಮುಂದೆ ಮಂಜೂರಾದ ಯೋಜನೆಗಳಿಗೆ ಈ ಅನುಕೂಲ ಸಿಗುವುದಿಲ್ಲ, ಹುಕ್ಕೇರಿ ಪಟ್ಟಣದ ನೀರು ಸರಬರಾಜು ಯೋಜನೆಯನ್ನು ೧೪.೭.೮೮ರಂದು ಮಂಜೂರು ಮಾಡಿರುವುದರಿಂದ ಪುರಸಭೆಯು ತನ್ನ ಶೇಕಡ ೧೦ರ ವಂತಿಗೆ ಕಟ್ಟಬೇಕಾಗುತ್ತದೆ,

ತುಂತುರು ನೀರಾವರಿ ಯೋಜನೆಗಳ ಬಗ್ಗೆ

೬೦೨. **ಶ್ರೀ ಜಿ ನಾರಾಯಣಕುಮಾರ್,** (ಬಿನ್ನಿಪೇಟೆ).—ಮಾನ್ಯ ಗ್ರಾಮಾಭಿವೃದ್ಧಿ ಪಸ್ತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂತುರು ನೀರಾವರಿ ಯೋಜನೆಗಳನ್ನು ಆಳವಡಿಸಿಕೊಳ್ಳಲು ರೈತರಿಗೆ ಸರಕಾರದಿಂದ ಸಹಾಯ ಧನವನ್ನೇನಾದರೂ ಸಬ್ಸಿಡಿಯನ್ನು ನೀಡಲಾಗುತ್ತಿದೆಯೇ?